(ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಎಲ್ಲಾ ಮಾನ್ಯ ಸದಸ್ಯರುಗಳೂ ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಸದನದ ಬಾವಿಯಲ್ಲಿ ಧರಣಿ ಹೂಡಿದರು)

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ಮನವಿ ಮಾಡಿಕೊಳ್ಳುವುದು ಇಷ್ಟೇ, ಇದರಲ್ಲಿ ಯಾವುದೇ ತರಹವಾದಂತಹ . . . .

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜೀನಗರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಾತನಾಡುತ್ತಾ ಎಡ್ವರ್ಡ್ ಹೀತ್ ಮತ್ತು ಹೆರಾಲ್ಡ್ ವಿಲ್ಸನ್‌ರವರ ಉದಾಹರಣೆಗಳನ್ನೆಲ್ಲಾ ಚೆನ್ನಾಗಿ ಕೊಟ್ಟರು. ಎಡ್ವರ್ಡ್ ಹೀತ್ ಮತ್ತು ಹೆರಾಲ್ಡ್ ವಿಲ್ಸನ್‌ರವರಿಬ್ಬರನ್ನೂ ನಾವು ಬಹಳ ಚೆನ್ನಾಗಿ ನೋಡಿದ್ದೇವೆ. ಅವರ ತಪ್ಪಿನ ಮೇಲೆ ನೀವು ರಕ್ಷಣೆ ಪಡೆಯುವುದು, ಅಥವಾ ನಮ್ಮ ಕಾಲದಲ್ಲಿ ಆಗಿಲ್ಲ, ನೀವು ಏಕೆ ಸರಿ ಮಾಡುವುದಿಲ್ಲ ಎಂದು ಅವರು ಹೇಳಿದ್ದನ್ನು ನೋಡಿದ್ದೀರಿ. ಒಂದಂತೂ ನಿಜ, ಇಷ್ಟ ಇದೆಯೋ ಇಲ್ಲವೋ, ತಪ್ಪು ಆಗಬಾರದಿತ್ತು, ಆದರೆ ತಪ್ಪು ಈಗ ಆಗುತ್ತಿದೆ. ಕಾನೂನಿನ ರಕ್ಷಣೆ ತೆಗೆದುಕೊಂಡು ಇವತ್ತು ನೀವು ಮಾಡುತ್ತಿದ್ದೀರಿ. ಆದರೆ ಬಹಳಷ್ಟು ಜನರ ಹಕ್ಕನ್ನು ನೀವು ಕಿತ್ತುಕೊಳ್ಳುತ್ತಿದ್ದೀರಿ. ಬಹಳಷ್ಟು ಜನ ಗ್ರಾಮೀಣ ಪ್ರದೇಶಗಳಲ್ಲಿದ್ದಾರೆ. ವಿಶೇಷವಾಗಿ ಈ ವರ್ಷ ಕೇಂದ್ರ ಸರ್ಕಾರದಿಂದ ಗ್ರಾಮ ಸಭೆಗಳಿಗೆ ಹೆಚ್ಚು ಆರ್ಥಿಕ ನೆರವು ಕೊಡುತ್ತಿರುವಾಗ, ಸುಮಾರು 210 ಕೋಟಿ ರೂ.ಗಳು ನಮ್ಮ ಕರ್ನಾಟಕದ ಗ್ರಾಮ ಸಭೆಗಳಿಗೆ ಬರಬೇಕಾದುದನ್ನು ಕೂಡ ನಾವು ಚುನಾವಣೆಯನ್ನು ಸರಿಯಾದ ಸಮಯದಲ್ಲಿ ಮಾಡದೇ ಇರುವುದರಿಂದ ನಾವು ಕಳೆದುಕೊಳ್ಳುತ್ತಿದ್ದೇವೆ. ತಮ್ಮ ಒಂದು ರಾಜಕೀಯ ಕಾರಣಕ್ಕೋಸ್ಕರ ನೀವೇನು ಮಾಡಲಿಕ್ಕೆ ಹೊರಟಿದ್ದೀರಿ, ಇದನ್ನು ನಾವು ಪ್ರತಿಭಟಿಸಿ, ಕರ್ನಾಟಕಕ್ಕೆ ಬರಬೇಕಾದ ನ್ಯಾಯಯುತವಾದ ಹಣವನ್ನೂ ಕೂಡ ನೀವು ಕಳೆದುಕೊಂಡಿರುವುದರಿಂದ ಅದನ್ನೂ ಕೂಡ ಪ್ರತಿಭಟಿಸಿ ನಮ್ಮ ಪಕ್ಷದವರೆಲ್ಲರೂ ಸಭಾತ್ಯಾಗ ಮಾಡುತ್ತಿದ್ದೇವೆ.

(ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಬಿಜೆಪಿಯ ಶಾಸಕಾಂಗ ಪಕ್ಷದ ಉಪನಾಯಕರಾದ ಮಾನ್ಯ ಸುರೇಶ್‌ಕುಮಾರ್‌ರವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ನಮ್ಮ ತರ್ಕದಿಂದಲೇ ಎಲ್ಲವೂ ಸರಿ ಹೋಗುತ್ತದೆಂದು ನಾನೇನೂ ಭಾವಿಸಿಲ್ಲ. ಆದರೆ ಅವರಿಗೇ ಗೊತ್ತಿದ್ದಂತೆ, ಶೇಕಡ 20ರಷ್ಟು ಭಾಗವನ್ನು ನಾವೇನು ಕತ್ತರಿಸುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದಾರೆ, ಅದು ಆಸಿಂಧು ಆಗಿರತಕ್ಕಂಥದ್ದು. ಇದರ ಬಗ್ಗೆ ನಾವು ಪತ್ರ ಕೂಡ ಬರೆದಿದ್ದೇವೆ. ಆದ್ದರಿಂದ ನಮಗೆ ಬರಬೇಕಾಗಿರತಕ್ಕಂಥ ಹಣ ಬರದೇ ಇರುವುದಿಲ್ಲ ಎನ್ನುವಂತಹ ಮಾತನ್ನೂ ಕೂಡ ನಾನು ಈ ಸಂದರ್ಭದಲ್ಲಿ ಪುನರುಚ್ಚರಿಸುತ್ತಾ, ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಕೇಂದ್ರ ಸಚಿವರಾದ ಮಾನ್ಯ ಬಾಬಾಗೌಡ ಪಾಟೇಲ್‌ರವರಿಗೆ ಪತ್ರ ಬರೆಯುವುದರ ಜೊತೆಗೆ, ಮಾನ್ಯ ಪ್ರಧಾನ ಮಂತ್ರಿಗಳಿಗೂ ಕೂಡ ಇದರ ಬಗ್ಗೆ ಪತ್ರ ಬರೆದಿದ್ದಾರೆ. ಈಗ ನಮಗೆ ಇಎಎಸ್‌ನ ಮೂರನೇ ಕಂತೇ ಬರಲಿಲ್ಲ. ಹಿಂದೆ ಇದ್ದಂತಹ ಕಾಲದಲ್ಲಿಯೂ ಕೂಡ ಮೂರನೇ ಕಂತೇ ಬರಲಿಲ್ಲ. ಹಳೆಯದಾದಂತಹ